ದಿನಾಂಕ: ಡಿಸೆಂಬರ್ 05,2013

ರಾಜ್ಯ ಸಭಾ ವಿರೋಧ ಪಕ್ಷದ

ನಾಯಕ ಶ್ರೀ ಅರುಣ್‌ಜೇಟ್ಲಿಅವರ ಫೇಸ್‌ಬುಕ್ ಪ್ರಕಟಣೆ

ಐದು ರಾಜ್ಯಗಳ ವಿಧಾನಸಭೆ ಚುನಾವಣೆಗಳ ಮತದಾನ ಮುಕ್ತಾಯವಾಗಿದೆ.ಫಲಿತಾಂಶಕ್ಕಾಗಿಕಾತರದಿಂದಕಾಯಲಾಗುತ್ತಿದೆ.ಕಾಂಗ್ರೆಸ್ ಪಕ್ಷಕ್ಕೆಎಲ್ಲೆಡೆ ಹಿನ್ನಡೆಯಾಗುವ ಸೂಚನೆಯನ್ನುಚುನಾವಣಾ ಸಮೀಕ್ಷೆಗಳು ತಿಳಿಸಿವೆ. ಸಂಭವನೀಯ ಫಲಿತಾಂಶದ ಸಂಕೇತ ಅವು ನೀಡಿವೆ. ಸಾಮಾನ್ಯವಾಗಿದೋಶಾಂಶವನ್ನೂ ಸಹ ಅವು ಹೊಂದಿವೆ. ಈ ಒಂದು ಲೋಪದ ಹೊರತಾಗಿಯೂ ಸಮೀಕ್ಷೆಗಳು ಸಂಭವನೀಯ ದಿಕ್ಸೂಚಿಯನ್ನು ನೀಡುತ್ತವೆ. ಕಾಂಗ್ರೆಸ್ ಪಕ್ಷ ಸಂಪೂರ್ಣವಾಗಿ ನೈತಿಕಅಂತರ್‌ಸತ್ವವನ್ನು ಕಳೆದುಕೊಂಡಿದೆ.ಚುನಾವಣೆಗಳ ಅಂತಿಮ ಹಂತದಲ್ಲಿ, ಕಾಂಗ್ರೆಸ್ ನಾಯಕರುದೆಹಲಿ ವಿಧಾನಸಭಾಚುನಾವಣಾ ಪ್ರಚಾರಕಾರ್ಯವನ್ನು ಹೆಚ್ಚುಕಮ್ಮಿಕೈಬಿಟ್ಟಿದ್ದರು. ಶ್ರೀಮತಿ ಶೀಲಾ ದೀಕ್ಷಿತ್‌ಏಕಾಂಗಿಯಾಗಿ ಸೆಣಸಿದರು.ನಿನ್ನೆ, ಚುನಾವಣಾ ಸಮೀಕ್ಷೆಚರ್ಚೆಯಲ್ಲಿಕಾಂಗ್ರೆಸ್ ವಕ್ತಾರರುಕಂಡುಕಾಣದಂತಿದ್ದರು.ಕೇವಲ ಸಮೀಕ್ಷೆಯಿಂದಲೇಕಾಂಗ್ರೆಸ್ ಪಕ್ಷ ಈ ಪರಿ ಕಳೆಕುಂದಿದರೆ, ಫಲಿತಾಂಶ ಹೊರಬಂದ ನಂತರಅವರ ಸ್ಥಿತಿ ನೆನೆಯಲು ಸಾಧ್ಯ.

ರಾಜಕೀಯ ಪಂಚಾಂಗದಲ್ಲಿಕಡೆದಿನವೆಂಬುದುಇರುವುದಿಲ್ಲ. ಅದೊಂದು ನಿರಂತರ ಪಂಚಾಂಗ. ಪ್ರಯತ್ನ ನಿಲ್ಲುವವರೆಗೂಎಂದೂ ಸೋಲು ನಿಮ್ಮದ್ದಲ್ಲ. ಕಾಂಗ್ರೆಸ್‌ತನ್ನ ಪ್ರಯತ್ನ ನಿಲ್ಲಿಸಿದೆ.ಅವರಕೇಂದ್ರ ನಾಯಕರುದೆಹಲಿ ಚುವಾವಣೆಯನ್ನುತೊರೆದಿದ್ದರು.ಕೇಂದ್ರ ಸರ್ಕಾರ ಸೃಷ್ಟಿಸಿದ ಆರ್ಥಿಕ ಮುಗ್ಗಟ್ಟು, ಅದುಎದುರಿಸುತ್ತಿರುವಗಂಭೀರ ಭ್ರಷ್ಟಾಚಾರದ ಅರೋಪಗಳು, ನೀತಿ ವೈಕಲ್ಯ ಹಾಗೂ ನಿರಾಸಾದಾಯಕ ನಾಯಕತ್ವವೆಲ್ಲವೂಕಾಂಗ್ರೆಸ್‌ಕಾರ್ಯಕರ್ತರಲ್ಲಿ ನಿರಾಸೆ ಮೂಡಿಸಿದೆ.ವಸ್ತುಸ್ಥಿತಿಗೆ ಕಾಂಗ್ರೆಸ್ ಪಕ್ಷ ಸ್ಪಂದಿಸದ ಹೊರತು, ಸರಿಯಾದಉತ್ತರ ಲಭಿಸಲು ಸಾಧ್ಯವಿಲ್ಲ. ರಾಜಕಾರಣದಲ್ಲಿ ವಂಶಾವಳಿ ಆಡಳಿತದ ವರ್ಚಸ್ಸು ದೀರ್ಘಾವಧಿಯಉತ್ತರ ನೀಡಲು ಸಾಧ್ಯವಿಲ್ಲ. ಒಂದುಕುಟುಂಬದ ಸುತ್ತರಾಜಕೀಯ ಪಕ್ಷಗಳು ಗುಂಪು ಮಾಡಿಕೊಂಡರೆ, ಆ ಕುಟುಂಬದ ಸಾಮರ್ಥ್ಯಕ್ಕೆಅನುಗುಣವಾಗಿ ಅವುಗಳ ಪ್ರಾಬಲ್ಯತೆ ಸೀಮಿತಗೊಳ್ಳುತ್ತದೆ.ಇಡೀ ಪಕ್ಷವೇ ವಂಶಾವಳಿ ಪಕ್ಷವಾಗಿದೆ.ವಂಶಸ್ಥರುಕಾರ್ಯಸಾಧಿಸುವಲ್ಲಿ ವಿಫಲವಾದರೆ,ಪಕ್ಷವೇ ವಿಫಲವಾಗುತ್ತದೆ.ಡಿಸೆಂಬರ್ 8, 2013ರಂದು ಚುನಾವಣೆಗಳ ಫಲಿತಾಂಶಗಳು ಹೊರಬಿದ್ದನಂತರಕಾಂಗ್ರೆಸ್ ಪಕ್ಷದ ಪ್ರತಿಕ್ರಿಯೆ ಹೇಗಿರಬಹುದುಎಂದು ನಾನು ಕುತುಹಲದಿಂದಕಾಯುತ್ತಿದ್ದೇನೆ. ಅವರು ಆಗ ಯೋಗ್ಯ ಪ್ರಶ್ನೆಗಳನ್ನು ಕೇಳುವುದಿಲ್ಲ ಎಂದು, ಆ ಪಕ್ಷವನ್ನು ನಿಕಟದಿಂದ ನೋಡುತ್ತಿರುವ ನನಗೆ, ಯಾವುದೇ ಸಂದೇಹವಿಲ್ಲ. ಕಾಂಗ್ರೆಸ್ ಪಕ್ಷದ ಸಾಂಪ್ರದಾಯಿಕಯೋಚನಾವಿಧಾನವನ್ನು ಪರಿಗಣಿಸಿದರೆ, ಸಮಸ್ಯೆಗೆ ಪರಿಹಾರವಾಗಿಅವರ

ಪ್ರತಿಕ್ರಿಯೆಏನಾದರು, ‘ಕುಟುಂಬದಓರ್ವ ಸದಸ್ಯ ವಿಫಲವಾದರೆ ಮತ್ತೋರ್ವ ಸದಸ್ಯನನ್ನು ಪ್ರಯತ್ನಿಸೋಣ’ಎಂಬುದಾಗಿಇದ್ದರೆ ನನಗೆ ಆಶ್ಚರ್ಯವಾಗದು.